AWARD OF THE KRISHNA RIVER WATER TRIBUNAL

280. Sri BAPU GOWDA RAYAPPA (Shahapur).—

Will the Chief Minister be pleased to state :—

(a) the claims of Karnataka, Andhra Pradesh and Maharashtra States that were placed before the Krishna River Water Tribunal regarding the sharing of the Krishna river water ;

(b) the details of the award given by the Tribunal (Statewise figure may be given) ;

(e) the names of the Projects which will be affected in the Krishna Basin by this Award ?

Sri H. M. CHANNABASAPPA (Minister for Public Works and Electricity) [On behalf of Sri DEVARAJ URS, (Chief Minister)].;—

(a) The demands of three basin States, excluding the requirements for domestic and industrial purposes, out of the dependable flows, are as under :

(i) Maharashtra	..	829 TMC
(ii) Karnataka	..	1430 TMC
(iii) Andhra Pradesh	..	1888 TMC

In adadittion surplus flows in excess of dependable flows were also claimed for allocation.

(b) The Tribunal has allocated the 75 per cent flow of Krishna river up to Vijayawada of 2026 TMC as under :

(i) Maharashtra	..	565 TMC
(ii) Karnataka	..	695 TMC
(iii) Andhra Pradesh	..	800 TMC

Surplus flows are not allocated to Karnataka and Maharashtra States. Maharashtra and Karnataka are restrained from using more water than that which is allocated to them and the State of Andhra Pradesh is permitted to use the remaining water without acquiring any rights except to the quantity allocated to it. In addition, augmentation of the dependable flow due to return flows within the Krishna basin is also allocated to the States.

(c) The Tribunal has stated that water has been allocated to each of the three States enblock and each State shall have the right to make beneficial use of the water allocated to it in any manner it thinks proper, subject to the conditions and restrictions placed on each State. In respect of Karnataka, Tribunal has put limitation that the total utilisation by Karnataka in Tungabhadra Sub-basin (including Vedavathy) shall not exceed 337 TMC leaving practically no scope

(SRI H. M. CHANNABASAPPA)

for future projects. The report is under study. Until detailed planning is made it is not possible to say which projects get affected in Karnataka State.

ಶ್ರೀ ಜೆ. ಎಲ್. ಕಬಾಡಿ.—ಇಲ್ಲಿ ತೀರ್ಪಿನ ಬಗ್ಗೆ ವರದಿಯನ್ನು ಅಭ್ಯಾಸಿಸಲಾಗುತ್ತಿದೆ ಎಂದು ಹೇಳಿದ್ದೀರಿ. ಈ ತೀರ್ಪು ಹೊರಬಿದ್ದು ಎಷ್ಟು ಕಾಲವಾಯಿತು ? ಈಗ ಸರ್ಕಾರದವರು ಎಲ್ಲಿಯ ವರೆಗೆ ಅಭ್ಯಾಸಿಸಿದ್ದಾರೆ ? ಇಲ್ಲಿ ಕೊಟ್ಟಿರುವ ಉತ್ತರವನ್ನು ನೋಡಿದರೆ ನಮ್ಮ ರಾಜ್ಯದಲ್ಲಿ ಈ ಬಗ್ಗೆ ಜಾಗ್ರತೆ ಅಭ್ಯಾಸಿಸುವ ಬುದ್ಧಿವಂತರು ಯಾರು ಇಲ್ಲವೇನೋ ಎಂದು ಅರ್ಥವಾಗುತ್ತದೆ.

† ಶ್ರೀ ಎಚ್. ಎಂ. ಚನ್ನಬಸಪ್ಪ.—ಎರಡು ಪ್ಲಸ್ ಎರಡು ನಾಲ್ಕು ಎಂದು ಹೇಳುವಂತಹ ಉತ್ತರ ಇದಲ್ಲ. ವಿಷಯ ಬಹಳ ಗಹನವಾಗಿದೆ. ಅನೇಕ ವಿಷಯಗಳನ್ನು ಗಮನದಲ್ಲಿಟ್ಟು ಕೊಂಡು ಮೊದಲಿನಿಂದ ಕೊನೆಯವರೆಗೆ ಅಭ್ಯಾಸ ಮಾಡಬೇಕಾಗಿದೆ. ಇದರಲ್ಲಿರುವ ಎಡರು ತೊಡರುಗಳು ಏನು, ಕಾನೂನು ಭಾಗದಲ್ಲಿರುವ ಲೋಪದೋಷಗಳೇನು ಎಂಬುದನ್ನು ಹುಡುಕಿ ನೋಡಿದಮೇಲೆ ಮುಂದೆ ಏನು ಮಾಡಬೇಕು ಎಂಬುದನ್ನು ತಾಂತ್ರಿಕ ತಜ್ಞರು ಮತ್ತು ವಕೀಲರು ಸೇರಿಕೊಂಡು ವಿಚಾರ ಮಾಡತಕ್ಕಂಥ ವಿಷಯವಾಗಿದೆ.

ಶ್ರೀ ಜೆ. ಎಲ್. ಕಬಾಡಿ.—ಈ ಒಂದು ತೀರ್ಪಿನಿಂದ ನಮ್ಮ ರಾಜ್ಯಕ್ಕೆ ಸಾಕಷ್ಟು ಪ್ರಮಾಣದಲ್ಲಿ ಅನ್ಯಾಯವಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೈಸೂರಿನ ಸಕಲ ಭಾಗಗಳಲ್ಲಿ ಹಿತಕ್ಕೆ ಧಕ್ಕೆಯಾಗಿದೆ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಶ್ರೀ ಜೆ. ಎಲ್. ಕಬಾಡಿ —ಕೃಷ್ಣ ನೀರನ್ನು ಹಂಚಲು ನ್ಯಾಯಮಂಡಲಯನ್ನು ನೇಮಕ ಮಾಡುವುದಕ್ಕೆ ಮೊದಲು, ಕೇಂದ್ರ ಸರ್ಕಾರದವರು ನಮ್ಮ ರಾಜ್ಯದ ಪಾಲಿಗೆ 800 ಟಿ.ಎಂ.ಸಿ. ನೀರನ್ನು ಕೊಡುತ್ತೇವೆಂದು ಹೇಳಿದಾಗ, ಅದಕ್ಕೂ ಹೆಚ್ಚು ನೀರು ಬೇಕೆಂದು ತಮ್ಮ ವಾದವನ್ನು ಕೇಂದ್ರದ ಮುಂದೆ ಇಟ್ಟ ಕಾರಣದಿಂದ ಈ ನ್ಯಾಯಮಂಡಲಿಯ ರಚನೆಯಾಯಿತು ಎಂಬುದು ನಿಜವೇ ಮತ್ತು ಅವರ ಒಂದು ತೀರ್ಪಿನಿಂದ ನಮ್ಮ ಪಾಲಿಗೆ ಇನ್ನು ಕಡಿಮೆ ನೀರು ಬರುವುದಕ್ಕೆ ಅವಕಾಶವಾಯಿತು ಅಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—800 ಟಿ.ಎಂ.ಸಿ. ನೀರನ್ನು ಕೊಡುತ್ತೇವೆಂದು ಹೇಳಿದವರು ಯಾರು ! ಆಧಾರ ಇಲ್ಲದೆ ಹೇಳಿದರೆ ಹೇಗೆ ಉತ್ತರ ಕೊಡುವುದು ?

ಶ್ರೀ ಎಸ್. ಎಂ. ಶಿರ್‌ನಾಳಿ ಚಂದ್ರಶೇಖರ್.—ಈಗ ಬಂಧಿರತಕ್ಕಂಥ ತೀರ್ಪಿನಿಂದ ನಮ್ಮ ರಾಜ್ಯದಲ್ಲಿ ಹಲವಾರು ಯೋಜನೆಗಳನ್ನು ಕೈಬಿಡುವ ಪರಿಸ್ಥಿತಿ ಬಂದಿದೆ. ಇದನ್ನು ಯಾವ ರೀತಿಯಿಂದ ಬಗೆಹರಿಸಲು ಯೋಚನೆ ಮಾಡಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೃಷ್ಣಾನದಿಯಲ್ಲಿ ಎಷ್ಟು ನೀರು ಇದೆಯೋ ಅದಕ್ಕಿಂತ ಹೆಚ್ಚು ನೀರನ್ನು ಯಾರೂ ಉಪಯೋಗಮಾಡುವುದಕ್ಕಾಗುವುದಿಲ್ಲ. ಆದರೆ ಈ ನೀರನ್ನು ಮೂರು ರಾಜ್ಯಗಳಿಗೂ ಹಂಚುವಾಗ ಯಾವ ಯಾವ ನೀತಿಯನ್ನು ಅನುಸರಿಸಿ ಹಂಚಬೇಕು ಎಂಬುದರ ಬಗ್ಗೆ ತೀರ್ಮಾನ ಕೈಕೊಳ್ಳಲು ಒಂದು ನ್ಯಾಯಮಂಡಲಿಯನ್ನು ಕೇಂದ್ರಸರ್ಕಾರದವರು ನೇಮಕಮಾಡಿದರು. ಅವರು ಈಗ ತಮ್ಮ ತೀರ್ಮಾನವನ್ನು ಕೊಟ್ಟಿದ್ದಾರೆ. ಆ ಒಂದು ತೀರ್ಮಾನದಲ್ಲಿ ತಾಂತ್ರಿಕ ದೋಷದೋಷಗಳು ಮತ್ತು ಕಾನೂನಿನ ಲೋಪ ದೋಷಗಳು ಏನಾದರೂ ಇವೆಯೇ ಎಂಬುದನ್ನು ನೋಡಬೇಕಾಗಿದೆ. ಮತ್ತು ನ್ಯಾಯಮಂಡಲಿಯವರ ತೀರ್ಪು ಆಖೈರಾದರೂ ಸಹ, ಕಾನೂನು ವಿಭಾಗದಲ್ಲಿ ಅವರು ತಮಗಿರುವ ಅಧಿಕಾರವನ್ನು ಸರಿಯಾಗಿ ಪ್ರಯೋಗ ಮಾಡಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಸಹ ನೋಡಬೇಕಾಗಿದೆ. ಮತ್ತು ಅವರಿಗೆ ಇರುವ ಅಧಿಕಾರವನ್ನು ಪ್ರಯೋಗ ಮಾಡದೆ ಬಿಟ್ಟ ಕಾರಣದಿಂದ ನಮಗೆ ಅನ್ಯಾಯವಾಗಿದೆಯೇ ಅಥವಾ ಅಧಿಕಾರವನ್ನು ಹೆಚ್ಚಿನ ಪ್ರಮಾಣದಲ್ಲಿ ಪ್ರಯೋಗ ಮಾಡಿದ್ದಾರೆಯೇ ಎಂಬುದನ್ನು ಸಹ ನೋಡಬೇಕಾಗಿದೆ. ಈ ಎಲ್ಲ ವಿಚಾರಗಳ ಬಗ್ಗೆ ನಾವು ತಾಂತ್ರಿಕ ತಜ್ಞರೊಡನೆ, ಕಾನೂನಿನ ತಜ್ಞರೊಡನೆ ಸಮಾಲೋಚನೆ ಮಾಡುತ್ತಿದ್ದೇವೆ. ಮತ್ತು ನಮ್ಮ ರಾಜ್ಯದ ಹಿತವನ್ನು ಕಾಯುವುದಕ್ಕೆ ಏನು ಕಾರ್ಯಕ್ರಮವನ್ನು ಕೈಕೊಳ್ಳಬೇಕು ಎಂಬ ಬಗ್ಗೆ ತೀವ್ರ ರೀತಿಯಿಂದ ಸಮಾಲೋಚನೆ ಮಾಡುತ್ತಿದ್ದೇವೆ.

Sri D. B. KALMANKAR.—The Tribunal has done great injustice to our State because all the surplus water has been given to Andhra Pradesh which is a clear cut discrimination. Secondly, since there is limitation under the law when review is done there is every possibility that the Tribunal may not do justice in the matter. In view of this whether it is not proper for the Government to approach the Supreme Court under article 3 : of the Constitution and though the original jurisdiction of the Supreme Court is barred why not prefer an appeal under article 131 ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಈ ಬಗ್ಗೆ ಸ್ಪಷ್ಟವಾಗಿ ಹೇಳಬೇಕಾದರೆ ತಾವು ಹೇಳುವ ಅಂಶವನ್ನು ಕೈಬಿಟ್ಟಿಲ್ಲ. ತಾವು ಹೇಳುವ ಅಂಶವನ್ನು ಕಾನೂನು ವಿಭಾಗದ ಪರಿಣತರು ಯೋಚನೆ ಮಾಡುತ್ತಿದ್ದಾರೆ. ಇದರಲ್ಲಿ ಅನೇಕ ಭಾಗಗಳು ಇವೆ. ಉದಾಹರಣೆಗೆ ಹೇಳುವುದಾದರೆ ನೀರು ನಮ್ಮರ್ಪಕವಾಗಿ ಹಂಚಬೇಕು ಎನ್ನತಕ್ಕಂಥಾದ್ದು. ಈಗ ಇರತಕ್ಕದ್ದು 75 ಪರ್ಸೆಂಟ್ ಡಿಪೆಂಡಬಿಲಿಟಿಗಿಂತ ಕಡಿಮೆ ಇದ್ದರೂ ಹೆಚ್ಚಿಗೆ ನೀರು ಬರುತ್ತದೆ. ಬಂದ ನೀರನ್ನು ವಿಭಾಗ ಮಾಡತಕ್ಕ ಅಧಿಕಾರ ಇದೆ. ಅದನ್ನು ಮಾಡುವುದು ಬಿಟ್ಟರೆ ಕೃಷ್ಣಾವ್ಯಾಲಿಯ ಅಥಾರಿಟಿಯ ಮುಂದಿಟ್ಟು ಮತ್ತೆ ಅದನ್ನು ಅಸೆಸ್ ಮಾಡಿ ಅವರಿಗೆ ಹಂಚಿಕೆ ಮಾಡಬಹುದು ಎಂದು ಆಜ್ಞೆ ಮಾಡಿದ್ದಾರೆ. ಕೃಷ್ಣಾ ವ್ಯಾಲಿ ಅಥಾರಿಟಿಯವರು ಮಾಡಿದ್ದನ್ನು 3 ರಾಜ್ಯಗಳವರು ಒಪ್ಪಬೇಕು. ಈ ಮೂರು ರಾಜ್ಯಗಳವರಲ್ಲಿ ಯಾರೊಬ್ಬರೂ ಅದನ್ನು ಒಪ್ಪದಿದ್ದರೂ ಕೂಡ ಅದು ಆಗುವುದಿಲ್ಲ. ಇಲ್ಲದಿದ್ದರೆ ಆದು ಪಾರ್ಲಿಮೆಂಟಿನಲ್ಲಿ ಪಾಸಾಗುವವರೆಗೂ ಹೆಚ್ಚುವರಿ ನೀರು ಏನು ಬರುತ್ತದೆ ಅದನ್ನು ಆಂಧ್ರ ಪ್ರದೇಶದವರು ಉಪಯೋಗಿಸಬೇಕು ಎಂದು ಆಜ್ಞೆ ಮಾಡಿದ್ದಾರೆ. ಇದು ಎಷ್ಟರಮಟ್ಟಿಗೆ ಅವರ ಕರ್ತವ್ಯ ನಿರ್ವಹಣೆಗೆ ಸರಿಹೋಗುತ್ತದೆ, ಅಥವಾ ಕರ್ತವ್ಯ ನಿರ್ವಹಣೆಗೆ ಚ್ಯುತಿ ಬರುತ್ತದೆ ಎನ್ನುವುದನ್ನು ವಿಚಾರ ಮಾಡತಕ್ಕದ್ದು ಇದೆ.

ಮತ್ತೊಂದು ವಿಷಯ ಏನೆಂದರೆ ಕೃಷ್ಣಾ ನದಿಯ ನೀರು ಹೊರಗಡೆಗೆ ಬೇರೆ ನದಿಗಳ ಪಾತ್ರಗಳಿಗೆ ಉಪಯೋಗ ಮಾಡತಕ್ಕದ್ದು ನ್ಯಾಯ ಎಂದು ಒಂದು ತೀರ್ಪನ್ನು ಕೊಟ್ಟಿದ್ದಾರೆ. ಅದು ಲೀಗಲ್ ಎಂದು ಹೇಳಿದ್ದಾರೆ. ಅವರು ರೆಫರ್ ಮಾಡಿದ ವಿಷಯವೆಲ್ಲಾ ಕೃಷ್ಣಾ ನದಿಯ ನೀರನ್ನು ಹಂಚಿಕೆ ಮಾಡಬೇಕು ಎನ್ನತಕ್ಕಂಥಾದ್ದು ಮಾತ್ರ ಟ್ರಿಬ್ಯುನಲ್ ಮುಂದೆ ಅಧಿಕೃತವಾಗಿ ಬಂತೇ ವಿನಾ ಮತ್ತೆ ಯಾವುದೂ ಬರಲಿಲ್ಲ. ಇದರ ಬಗ್ಗೆ ಇರತಕ್ಕ ಎಲ್ಲಾ ವಿಚಾರಗಳನ್ನು ಈ ವಿಷಯ ಚರ್ಚೆಗೆ ಬಂದಾಗ ತಿಳಿಸುತ್ತೇನೆ. ಈಗ ಪ್ರಶ್ನೋತ್ತರ ಕಾಲದಲ್ಲಿ ನಾನು ಇಷ್ಟು ಮಾತ್ರ ಹೇಳಬಲ್ಲೆ. ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತುಕೊಂಡಿಲ್ಲ. ಇದನ್ನು ಕಣ್ಣುಮೇಲೆ ಕಣ್ಣಿಟ್ಟು ವಿಚಾರ ಮಾಡುತ್ತಿದ್ದೇವೆ. ಇದು ಸುಲಭವಾಗಿ ಆಗುವುದಿದ್ದರೆ ಒಂದು ನಿಮಿಷದಲ್ಲಿ ಹಾರಿಸಿ ಬಿಡುತ್ತಿದ್ದೆವು. ನಾನು ಸ್ಪಷ್ಟವಾಗಿ ಹೇಳುತ್ತೇನೆ ರಾಜ್ಯದ ಹಿತವನ್ನು ಕಾಯುವುದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅಷ್ಟೂ ಕ್ರಮವನ್ನು ಕಾಲ ವಿಳಂಬ ಮಾಡದೆ ತೆಗೆದುಕೊಳ್ಳುತ್ತೇವೆ ಎಂದು ನಾನು ಸ್ಪಷ್ಟವಾದ ಭರವಸೆಯನ್ನು ಕೊಡುತ್ತೇನೆ.

ಶ್ರೀ ಆರ್. ಎಸ್. ಪಾಟೀಲ್.—ಈಗಾಗಲೇ ಈ ಸಂಬಂಧದಲ್ಲಿ ತೀರ್ಪು ಕೊಟ್ಟು 3 ತಿಂಗಳು ಆಯಿತು. ಕಾಯಿದೆ ವಿಷಯವನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ತಾವು ಹೇಳಿದಿರಿ. ಈಗ ಕಾಯಿದೆ ಪ್ರಕಾರ ಸುಪ್ರೀಮ್ ಕೋರ್ಟಿಗೆ ಹೋಗಬೇಕು. ಆದ್ದರಿಂದ ಈ ಬಗ್ಗೆ ಈ ತಿಂಗಳು 24ನೇ ತಾರೀಖಿನ ಒಳಗೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಕಾನೂನು ಭಾಗದಲ್ಲಿ ಎಲ್ಲಾ ವಿಚಾರಣೆಯಾಗುತ್ತಿದೆ. ಅಷ್ಟು ದೂರ ಸರ್ಕಾರ ಕಣ್ಣುಮುಚ್ಚಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಸೂಕ್ತ ಕಾಲದಲ್ಲಿ ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಕೃಷ್ಣಾ ಮೇಲ್ಡಂಡೆಯ ವಿಚಾರದಲ್ಲಿ ಇದ್ದ ವಿವಾದದ ಬಗ್ಗೆ ತೀರ್ಪು ನಮಗೆ ವಿರೋಧವಾಗಿದೆ. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಇದರ ಬಗ್ಗೆ ಅಂತಿಮ ತೀರ್ಮಾನವನ್ನು ಯಾವಾಗ ತೆಗೆದುಕೊಳ್ಳುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಕೃಷ್ಣಾ ನದಿಯ ನೀರಿನ ಹಂಚಿಕೆಯ ವಿವಾದದ ಬಗ್ಗೆ ಟ್ರಿಬ್ಯುನಲ್‌ನವರು ಏನು ತೀರ್ಪು ಕೊಟ್ಟಿದ್ದಾರೆ ಅದು ಗೆಜೆಟ್‌ನಲ್ಲಿ ಪಬ್ಲಿಷ್ ಆಗುವವರೆಗೆ ಅದು ತೀರ್ಪಾಗುವುದಿಲ್ಲ. ಅದರ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುವುದು ಸರ್ಕಾರದ ಕರ್ತವ್ಯ.